**ಒ.ಎಸ್.ನಂ. 321/14**

**ಡಿ. ಡಬ್ಲೂ-1**

**ದಿನಾಂಕಃ 22.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರಿದ ಪಾಟೀ ಸವಾಲು :- ವಾದಿ ಪರ ವಕೀಲರಿಂದಃ-**

ನಿಡಿ 1 ಯಾವ ಆಸ್ತಿಗೆ ಸಂಬಂಧಿಸಿದ ದಾಖಲೆ ಎಂದರೆ ಸರ್ವೇ ನಂಬರ್ 17 ಕ್ಕೆ ಸಂಬಂಧಿಸಿದ್ದು ಎಂದು ನುಡಿಯುತ್ತಾರೆ. ನಿಡಿ 1 ರಲ್ಲಿ ಇರುವ ಚೆಕ್ಕು ಬಂದಿ ಸರ್ವೇ ನಂ 17 ರ ಚೆಕ್ಕು ಬಂದಿ ಎಂದರೆ ಸರಿ. ನಿಡಿ 2 LRF 150/75-76 ಸರ್ವೇ ನಂ 17 ಕ್ಕೆ ಸಂಬಂಧಿಸಿದ ದಾಖಲೆ. ನಿಡಿ 3 ಮತ್ತು 4 ಸರ್ವೇ ನಂ 5 ಮತ್ತು 6 ಕ್ಕೆ ಸಂಬಂಧಪಟ್ಟದ್ದು ಎಂದು ನುಡಿಯುತ್ತಾರೆ. ನಿಡಿ 4 ರಲ್ಲಿ ಸರ್ವೇ ನಂ 5 ಮತ್ತು 6 ಅಥವಾ 17 ಎಂದು ನಮೂದು ಇಲ್ಲ ಎಂದರೆ ಸರಿ. ನಿಡಿ 5 ಸರ್ವೇ ನಂ 17 ಕ್ಕೆ ಸಂಬಂಧಪಟ್ಟ ದಾಖಲೆ. ನಿಡಿ 6, 7, 9 , ಸರ್ವೇ ನಂ 5 ಕ್ಕೆ ಸಂಬಂಧಪಟ್ಟ ದಾಖಲೆ ಅಲ್ಲ ಎಂದರೆ ಸರಿ. ನಿಡಿ 8 ರಲ್ಲಿ ಸರ್ವೇ ನಂ ನಮೂದಿಸಿಲ್ಲ ಎಂದರೆ ಸರಿ. ನಿಡಿ 10 ರಲ್ಲಿ ಸರ್ವೇ ನಂ 5 ವಿಸ್ತೀರ್ಣ 2 ಎಕರೆ 29 ಗುಂಟೆ ಸಿದ್ದೇಗೌಡ, ಸಿದೇನಹಳ್ಳಿ ಎಂದು ನಮೂದು ಇದ್ದು ಅವರಿಗೆ ಮಂಜೂರು ಆಗಿರುತ್ತದೆ ಎಂದರೆ ಸರಿ, ಮುಂದುವರೆದು ನಮಗೂ ಮಂಜೂರು ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿ ನಮ್ಮ ಹೆಸರಿಗೆ ನಮೂದು ಇಲ್ಲ ಎಂದರೆ ಸರಿ. ವಾದಿ ತಂದೆಯ ಹೆಸರು ಕರೀಗೌಡ. ಒಟ್ಟು 5 ಎಕರೆ 29 ಗುಂಟೆಯಲ್ಲಿ 3 ಎಕರೆ ವಾದಿ ತಂದೆಗೆ, 2 ಎಕರೆ 29 ಗುಂಟೆ ಸಿದ್ದೇಗೌಡರಿಗೆ ಮಂಜೂರಾಗಿರುತ್ತದೆ ಎಂದರೆ ಅವರಿಗೂ ಆಗಿರುತ್ತದೆ ನನ್ನ ತಾತ ಕರೀಗೌಡರಿಗೂ ಆಗಿರುತ್ತದೆ ಎಂದು ನುಡಿಯುತ್ತಾರೆ. ಕರೀಗೌಡ ಮೃತಪಟ್ಟ ನಂತರ 76-77 ನೇ ಸಾಲಿನಲ್ಲಿ ಅವರ ಹೆಂಡತಿಯಾದ ವಾದಿ ತಾಯಿಗೆ ದಾವಾ ಆಸ್ತಿ ಮಂಜೂರು ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ನಿಡಿ 15 ಸರ್ವೇ ನಂ 5 ಕ್ಕೆ ಸಂಬಂಧಪಟ್ಟ ದಾಖಲೆ ಅಲ್ಲ ಸರ್ವೇ ನಂ 6 ಕ್ಕೆ ಸಂಬಂಧಪಟ್ಟ ದಾಖಲೆ ಎಂದರೆ ಸರಿ. ನಿಡಿ 21 ರಲ್ಲಿ ಇರುವ ಚೆಕ್ಕು ಬಂದಿ ಯಾವ ಸರ್ವೇ ನಂ ಗೆ ಸಂಬಂಧಪಟ್ಟ ಚೆಕ್ಕು ಬಂದಿ ಎಂದರೆ ಸರ್ವೇ 5 ಮತ್ತು 6 ಕ್ಕೆ ಸಂಬಂಧಪಟ್ಟ ಚೆಕ್ಕು ಬಂದಿ ಎಂದು ನುಡಿಯುತ್ತಾರೆ. ಮುಂದುವರೆದು ಸರ್ವೇ ನಂ 5 ಮತ್ತು 6 ಕ್ಕೆ ಒಟ್ಟಿಗೆ ಸಂಬಂಧಪಟ್ಟ ಚೆಕ್ಕು ಬಂದಿ ಎಂದು ನುಡಿಯುತ್ತಾರೆ. ಸದರಿ ಪ್ರಕರಣ

ಬಾಕಿಇರುವಾಗ RA 80/20 ರಂತೆ ಹುಣಸೂರು ಎ ಸಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಮೇಲ್ಮನವಿ ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ಮೇಲ್ಮನವಿ ಸಲ್ಲಿಸುವ ಮೊದಲು ತಹಸೀಲ್ದಾರವರಿಗೆ ಖಾತೆ ಬದಲಾವಣೆ ಅರ್ಜಿ ಕೊಟ್ಟಿದ್ದೆ ಎಂದರೆ ಸರಿ. ಸದರಿ ಅರ್ಜಿ ಸರ್ವೇ ನಂ 5 ಮತ್ತು 6 ಕ್ಕೆ ಸಂಬಂಧಪಟ್ಟಂತೆ ಕೊಟ್ಟಿರುತ್ತೇನೆ. ಸಾಮಾನ್ಯವಾಗಿ ಈಗಲೂ ಹಳ್ಳಿ ಕಡೆಗೆ ಹಿರಿಯರು ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣಕ್ಕೆ ಬದಲಾಗಿ ಮೂಡಲು, ಪಡುವಲು, ತೆಂಕಲು, ಬಡಗಲು ಎಂದು ಕರೆಯುತ್ತಾರೆ ಎಂದರೆ ಸರಿ.

ಸರ್ವೇ ನಂ 6 ರಲ್ಲಿ ಪ್ರಸ್ತುತ ನಾವೇ ಸ್ವಾಧೀನ ಇರುತ್ತೇವೆ. ಸದರಿ ಸ್ವತ್ತಿನಲ್ಲಿ ನಾವೇ ಸ್ವಾಧೀನ ಇರುತ್ತೇವೆ ಎಂದು ತೋರಿಸಲು ಪ್ರಸ್ತುತ ಪಹಣಿ ಹಾಜರುಪಡಿಸುತ್ತೀರಾ ಎಂದರೆ ಮಾರಾಟ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ದಿಃ27.02.2020 ರಂದು ಮೈಸೂರಿನ ಭಾಗ್ಯಲಕ್ಷ್ಮೀ ರವರಿಗೆ ಸರ್ವೇ ನಂ 6 ನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಸದರಿ ಮಾರಾಟವಾದ ಸ್ವತ್ತಿನಲ್ಲಿ ಖರೀದಿದಾರರೇ ಸ್ವಾಧೀನ ಇರುತ್ತಾರೆ ಎಂದರೆ ನಾವೇ ಸ್ವಾಧೀನ ಇರುತ್ತೇವೆ ಎಂದು ನುಡಿಯುತ್ತಾರೆ. ದಾವೆ ಸಲ್ಲಿಸುವ ಮೊದಲು ದಾವಾ ಸ್ವತ್ತಿನ ಪೂರ್ವ ಭಾಗದಲ್ಲಿ ಸರ್ವೇ ನಂ 6 ರಲ್ಲಿ ನಾನು ಸ್ವಾಧೀನ ಇದ್ದೆ ಎಂದರೆ ಸರಿ. ಮುಂದುವರೆದು ಸರ್ವೇ ನಂ 5 ರಲ್ಲಿಯೂ ಸಹ ಸ್ವಾಧೀನ ಇದ್ದೇವೆ ಎಂದು ನುಡಿಯುತ್ತಾರೆ. ಸರ್ವೇ ನಂ 5 ರ ಜಮೀನಿಗೆ ಸಂಬಂಧಪಟ್ಟಂತೆ ನನ್ನ ಹೆಸರಿನಲ್ಲಿ ಪಹಣಿ ಇಲ್ಲ ಎಂದರೆ ಸರಿ. ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸರ್ವೇ ನಂ 6 ನ್ನು ಈಗಾಗಲೇ ಮಾರಾಟ ಮಾಡಿದ್ದು, ಸರ್ವೇ ನಂ 5 ನ್ನು ಕಬಳಿಸಲು ಪ್ರಯತ್ನಪಡುತ್ತಿದ್ದೇವೆ ಎಂದರೆ ಸರಿಯಲ್ಲ. ಸರ್ವೇ ನಂ 5 ಅದಲು ಬದಲಾಗಿದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ 6 ರಲ್ಲಿ ನಾನು ಸ್ವಾಧೀನ ಇದ್ದು ಸರ್ವೇ ನಂ 5 ರಲ್ಲಿ ವಾದಿ ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ. ವಾದಿಯ ವ್ಯವಸಾಯದ ಜಮೀನಿಗೆ ಪದೆ ಪದೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ  ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**